ದಿನಾಂಕ: 18-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀಎಮ್.ಡಿ.ಪಿ. ವಾದಿ ಪರ ವಕೀಲರಿಂದಃ**

ದಾವಾ ಆಸ್ತಿಯ ವ್ಯವಹಾರ ಆಗುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ಉತಾರವನ್ನು ನೋಡಿರುತ್ತೇನೆ, ಅವುಗಳನ್ನು ಹೊರತುಪಡಿಸಿ ಬೇರೆ ದಾಖಲೆ ನೋಡಿಲ್ಲ. ನಮ್ಮಗಿಂತ ಮೊದಲು ಮಾರುತಿ ಯಲ್ಲಪ್ಪ ಚಿಗಡೊಳ್ಳಿ ಇವರಿಗೆ ಪ್ರತಿವಾದಿ 2, 3 ಮತ್ತು ಪ್ರತಿವಾದಿ 4 ರವರ ಗಂಡ ಬರೆದುಕೊಟ್ಟ ಖರೀದಿ ಕರಾರ ಪತ್ರ ಭದ್ರತೆಗಾಗಿ ಬರೆದುಕೊಟ್ಟ ಖರೀದಿ ಕರಾರ ಪತ್ರ ಎಂದರೆ ಸರಿಯಲ್ಲ.

2. ನಮ್ಮ ಹೆಸರಿಗೆ ಖರೀದಿ ಕರಾರಪತ್ರ ಆಗುವುದಕ್ಕಿಂತ ಪೂರ್ವದಲ್ಲಿ ಮಾರುತಿ ಯಲ್ಲಪ್ಪ ಚಿಗಡೊಳ್ಳಿ ಇವರಿಗೆ ಪ್ರತಿವಾದಿ 2, 3 ಮತ್ತು ಪ್ರತಿವಾದಿ 4 ರವರ ಗಂಡ ಬರೆದುಕೊಟ್ಟ ಖರೀದಿ ಕರಾರ ಪತ್ರ ಏಕೇ ರದ್ದುಪಡಿಸಿಕೊಂಡಿದ್ದೀರಿ ಎಂದು ನಾನು ಕೇಳಿರುತ್ತೇನೆ. ಆಗ ಅವರು ಜಾಸ್ತಿ ಹಣ ಕೇಳಿದ್ದಕ್ಕಾಗಿ ಖರೀದಿ ಕರಾರ ಪತ್ರ ರದ್ದುಪಡಿಸಿಕೊಂಡಿದ್ದಾಗಿ ಹೇಳಿರುತ್ತಾರೆ. ಜಾಸ್ತಿ ಹಣ ಕೇಳಿದ್ದಕ್ಕೆ ಖರೀದಿ ಕರಾರ ಪತ್ರ ರದ್ದು ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮಾರುತಿ ಯಲ್ಲಪ್ಪ ಚಿಗಡೊಳ್ಳಿ ಇವರ ಜೊತೆ ಆದ ಖರೀದಿ ಕರಾರ ಪತ್ರ ರದ್ದು ಮಾಡಿಕೊಳ್ಳುವಾಗ ಅವರಿಗೆ ದುಡ್ಡು ಕೊಟ್ಟ ರದ್ದು

ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾರುತಿ ಯಲ್ಲಪ್ಪ ಚಿಗಡೊಳ್ಳಿ ಇವರಿಗೆ ವಾಪಸ ಕೊಡಲು ದುಡ್ಡು ಇಲ್ಲದೇ ಇರುವುದರಿಂದ ಪ್ರತಿವಾದಿಯರು ನಮ ಜೊತೆ ಖರೀದಿ ಕರಾರ ಪತ್ರ ಮಾಡಿಕೊಂಡು ನಮ್ಮಿಂದ ಪಡೆದ ಖರೀದಿ ಮೊತ್ತವನ್ನು ಮಾರುತಿ ಯಲ್ಲಪ್ಪ ಚಿಗಡೊಳ್ಳಿ ಇವರಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

4. ರೂ.15,00,000/- ನಾವು ಖರೀದಿ ಕರಾರ ಪತ್ರ ಬರೆದುಕೊಟ್ಟ ದಿನವೇ ಕೊಟ್ಟಿರುತ್ತೇವೆ. ಪ್ರತಿವಾದಿ 2, 3 ಮತ್ತು ಪ್ರತಿವಾದಿ 4 ರವರ ಗಂಡ ಇವರಿಗೆ ಬಡ್ಡಿಯ ಮೇಲೆ ದುಡ್ಡು ಕೊಟ್ಟಿದ್ದರಿಂದ ಅದರ ಭದ್ರತೆಗಾಗಿ ಪ್ರತಿವಾದಿ 2, 3 ಮತ್ತು ಪ್ರತಿವಾದಿ 4 ರವರ ಗಂಡ ನನಗೆ ಖರೀದಿ ಕರಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-12 ಮತ್ತು 13ನ್ನು ಈ ಮುಂಚೆ ನನ್ನ ಸಾಕ್ಷಿ ಆದ ಸಮಯದಲ್ಲಿ ಹಾಜರ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

5. ಮೂಲ ಪುರುಷ ಸಿದ್ದಪ್ಪ ಇವರಿಗೆ ವಾದಿಯರು ಹೆಣ್ಣು ಮಕ್ಕಳು ಎಂದು ನನಗೆ ಗೊತ್ತಿದ್ದರೂ ಸಹ ಗೊತ್ತಿರಲಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರ ಹಕ್ಕು ನಷ್ಟ ಉಂಟು ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ